## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1067/2021
ಪಿ.ಓ. ಎಆರ್ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 12/11/2021.

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ. ಕೆ.ಮಂಜಪ್ಪ ಬಿನ್ ತಿಮ್ಮಪ್ಪ, ಕಿರಿಯ ಅಭಿಯಂತರರು (ಶಾಖಾಧಿಕಾರಿ), ಗ್ರಾಮಾಂತರ ಶಾಖೆ, ಮೆಸ್ಕಾಂ, ಶಿಕಾರಿಪುರ ಉಪವಿಭಾಗ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ರವರ ದುರ್ನಡತೆ / ದುರ್ವರ್ತನೆ ಬಗ್ಗೆ.

***

1) ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು, ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ. ಕೆ. ಮಂಜಪ್ಪ ಬಿನ್ ತಿಮ್ಮಪ್ಪ, ಕಿರಿಯ ಅಭಿಯಂತರರು (ಶಾಖಾಧಿಕಾರಿ), ಗ್ರಾಮಾಂತರ ಶಾಖೆ, ಮೆಸ್ಕಾಂ, ಶಿಕಾರಿಪುರ ಉಪವಿಭಾಗ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ದೂರುದಾರರಾದ ಶ್ರೀ. ರಾಮಪ್ಪ ಬಿನ್ ಹನುಮಂತಪ್ಪ, ಗಾಂಧಿನಗರ (ಶೀಲವಂತನ ಕೊಪ್ಪ), ಅಂಬಾರಗೊಪ್ಪ ಪೋಸ್ಟ್, ಉಡುಗಣಿ, ಶಿಕಾರಿಪುರ ತಾಲ್ಲೂಕು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ). ದೂರುದಾರರು ಅವರ ಕೆಲಸದ ಬಗ್ಗೆ ಎದುರುದಾರರನ್ನು ಭೇಟಿಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ / ದುರ್ವರ್ತನೆ ಎಸಗಿರುವ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 ರ ಅಡಿಯಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ತನಿಖೆ ಕೈಗೊಂಡಿದ್ದಾರೆ.

**2) ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ ಶ್ರೀ ರಾಮಪ್ಪ ಬಿನ್ ಹನುಮಂತಪ್ಪ ರವರು ವ್ಯವಸಾಯ ವೃತ್ತಿ ಮಾಡಿಕೊಂಡಿರುತ್ತಾರೆ. ದೂರುದಾರರ ಅಣ್ಣ ಶೇಖರಪ್ಪ ಇವರ ಹೆಸರಿನಲ್ಲಿ ಸರ್ವೇ ನಂ: 47/5 ರಲ್ಲಿ 2 ಎಕರೆ ಜಮೀನಿಗೆ ಈ ಹಿಂದೆ ಅನಧಿಕೃತವಾಗಿ ವಿದ್ಯುತ್‌ಚ್ಛಕ್ತಿ ಉಪಯೋಗಿಸುತ್ತಿದ್ದುದರಿಂದ, ಮೆಸ್ಕಾಂ ನಿಂದ 10,000/- ರೂ. ದಂಡ ವಿಧಿಸಿದ್ದರಿಂದ, ದೂರುದಾರರು ದಿ: 29/4/2005 ರಂದು ದಂಡ ಕಟ್ಟಿರುತ್ತಾರೆ. ಅದೇ ದಿನ ದೂರುದಾರರ ಅಣ್ಣನ ಹೆಸರಿನಲ್ಲಿ ಅಕ್ರಮ ಸಕ್ರಮದಡಿ ಅರ್ಜಿ ಸಲ್ಲಿಸಿ, ಒಟ್ಟು 7,680/-

ರೂ.ಗಳನ್ನು ಕಟ್ಟಿರುತ್ತಾರೆ. ನಂತರ ಈಗ್ಗೆ ಒಂದು ತಿಂಗಳ ಹಿಂದೆ ದೂರುದಾರರು ಮೆಸ್ಕಾಂ ಕಛೇರಿಗೆ ಹೋಗಿ ಎ.ಇ.ಇ. ರವರನ್ನು ಕಂಡು ಅಕ್ರಮ ಸಕ್ರಮದ ಅಡಿಯಲ್ಲಿ ಅರ್ಜಿ ನೀಡಿದ ಬಗ್ಗೆ ವಿಚಾರಿಸಿದಾಗ, ಅವರು ದೂರುದಾರರಿಗೆ ಟಿ.ಸಿ. ಮತ್ತು ಲೈನ್ ಮಂಜೂರು ಆಗಿರುತ್ತದೆಂದು, ಗುತ್ತಿಗೆದಾರರಿಗೆ ಪೋನ್ ಮಾಡಿ ಕೆಲಸ ಮಾಡುವಂತೆ ಹೇಳಿ ಗುತ್ತಿಗೆದಾರರ ಮೊಬೈಲ್ ನಂಬರನ್ನು ದೂರುದಾರರಿಗೆ ನೀಡಿ ಭೇಟಿಯಾಗುವಂತೆ ಹೇಳಿ ಕಳುಹಿಸಿರುತ್ತಾರೆ. ಎರಡು ಮೂರು ದಿನಗಳಾದರೂ ಗುತ್ತಿಗೆದಾರರು ದೂರುದಾರರಿಗೆ ಸಿಗದೆ ಇದ್ದುದರಿಂದ, ಅವರ ಮೊಬೈಲ್ ನಂಬರಿಗೆ ಕಾಲ್ ಹೋಗದೆ ಇದ್ದುದರಿಂದ ಪುನ: ಮೆಸ್ಕಾಂ ಕಛೇರಿಗೆ ಬಂದು, ಎದುರುದಾರರನ್ನು ವಿಚಾರಿಸಿದಾಗ, ಅವರು ಇನ್ನು ನಿಮ್ಮದು ಮಂಜೂರು ಆಗಿಲ್ಲ, ಮಂಜೂರಾತಿ ತರಲು ಮಂಗಳೂರಿಗೆ ಹೋಗಬೇಕು ಅಂತ ಹೇಳಿರುತ್ತಾರೆ. ಆಗ ದೂರುದಾರರು ಎ.ಇ.ಇ. ರವರು ಮಂಜೂರಾತಿ ಆಗಿದೆ ಅಂತ ಹೇಳಿದ್ದು, ಪಟ್ಟಿಯಲ್ಲಿ ಅಣ್ಣನ ಹೆಸರು ಬಂದಿದೆ ಎಂದು ಹೇಳಿದಾಗ ಪಟ್ಟಿಯಲ್ಲಿ ಹೆಸರು ಇದೆ ಆದರೆ ಕೆಲಸ ಮಾಡಿ ಅಂತ ಬಂದಿಲ್ಲ, ಈ ಪಟ್ಟಿ ಈ ಕಛೇರಿಯಿಂದ ರೆಡಿ ಮಾಡಿದ್ದು, ನಿಮ್ಮ ಕೆಲಸ ಮಾಡುವ ಜವಾಬ್ದಾರಿ ತನ್ನದು ಎಷ್ಟು ಕಂಬ ಇದ್ದರು ಮಾಡಿಕೊಡುತ್ತೇನೆ ನಮ್ಮದು ಅದೆಷ್ಟು ಕೊಡೊದೈತೆ ಕೊಡಬೇಕು ನಿಮ್ಮ ಹೆಸರು ಬಂದ ಮೇಲೆ ಬನ್ನಿ ಅಂತ ಹೇಳಿ ಕಳುಹಿಸಿರುತ್ತಾರೆ.

ii) ದಿನಾಂಕ: 17/11/2018 ರಂದು ದೂರುದಾರರು ಮತ್ತು ದೂರುದಾರರ ಸ್ನೇಹಿತ ನಾಗರಾಜ ರವರನ್ನು ಕರೆದುಕೊಂಡು ಶಿಕಾರಿಪುರ ಮೆಸ್ಕಾಂ ಕಛೇರಿಗೆ ಮಧ್ಯಾಹ್ನ 3.00 ಗಂಟೆಗೆ ಹೋಗಿ ಎದುರುದಾರರನ್ನು ಭೇಟಿಯಾಗಿ ಅವರ ಅಕ್ರಮ ಸಕ್ರಮದ ಟಿ.ಸಿ.ಯ ಬಗ್ಗೆ ಕೇಳಿದಾಗ, ಅವರು ದೂರುದಾರರನ್ನು ಹೊರಗಡೆ ಕಳುಹಿಸಿ ಸ್ನೇಹಿತ ನಾಗರಾಜರವರನ್ನು ಒಳಗಡೆ ಕರೆದಿದ್ದು, ಆಗ ದೂರುದಾರರು ಅವರ ಮೊಬೈಲ್‌ನ್ನು ಆನ್ ಮಾಡಿ ಸ್ನೇಹಿತನ ಜೇಬಿನಲ್ಲಿ ಇಟ್ಟು ಕಳುಹಿಸಿರುತ್ತಾರೆ. ದೂರುದಾರರ ಸ್ನೇಹಿತ ಒಳಗಡೆ ಹೋಗಿ ಟಿ.ಸಿ.ಯ ಬಗ್ಗೆ ಕೇಳಿದಾಗ, ಎದುರುದಾರರು ಕೆಲಸ ಮಾಡಿಕೊಡುವ ಜವಾಬ್ದಾರಿ ತನ್ನದು ಅದಕ್ಕೆ 30,000/- ರೂ ಕೊಡೂಕ್ಕೆ ಹೇಳಿದ್ದೆ ಅಂದಾಗ ಸ್ನೇಹಿತ ನಾಗರಾಜ ಅಷ್ಟು ಆಗುವುದಿಲ್ಲ ಸರ್ ಅಂತ ಹೇಳಿದ್ದು, ಆಗ ಅವರು ಈಗ ಎಷ್ಟು ಇದೆ ಕೊಟ್ಟು ಹೋಗಿ, ಸೋಮವಾರ ಬಂದು ಬಗೆಹರಿಸಿಕೊಂಡು ಹೋಗಿರಿ ಅಂತ ಹೇಳಿದ್ದು, ಆ ಮಾತುಗಳು ದೂರುದಾರರ ಮೊಬೈಲ್‌ನಲ್ಲಿ ಧ್ವನಿ ಮುದ್ರಿತವಾಗಿರುತ್ತದೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿರುವುದರಿಂದ, ದಿ: 27/11/2018 ರಂದು ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ನಿರೀಕ್ಷಕರಿಗೆ ದೂರುದಾರರು ದೂರನ್ನು ಸಲ್ಲಿಸಿರುತ್ತಾರೆ, ಆ ಬಗ್ಗೆ ಶಿವಮೊಗ್ಗ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ಠಾಣೆಯ ಗುನ್ನೆ ನಂ:18/2018 ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದುಪಡಿ ಕಾಯ್ದೆ-2018)

ರಡಿಯಲ್ಲಿ ಎದುರುದಾರರಾದ ನಿಮ್ಮ ವಿರುದ್ಧ ಪ್ರ.ವ.ವ. ವರದಿ ದಾಖಲು ಮಾಡಿರುತ್ತಾರೆ.

iii) ದಿ: 25/01/2017 ರಂದು ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಸಿ, ದೂರುದಾರರನ್ನು ಪರಿಚಯಿಸಿ, ಜಪ್ತಿಪೂರ್ವದ ಪಂಚನಾಮೆಯ ಸಮಯದಲ್ಲಿ ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ ದೂರುದಾರರು ಎದುರುದಾರರ ಜೊತೆ ಮಾತನಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಗೆ ನೀಡಿದ್ದು, ತನಿಖಾಧಿಕಾರಿಯವರು ಸದರಿ ಸಂಭಾಷಣೆಯನ್ನು ಕಂಪ್ಯೂಟರ್‌ಗೆ ಹಾಕಿ ಎಲ್ಲರಿಗೂ ಕೇಳಿಸಿ, ನಂತರ ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಖಿಕರಣ ಗೊಳಿಸಿದ ನಂತರ, ಮೊಬೈಲ್ ನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಎರಡು ಸಿ.ಡಿಗಳಿಗೆ ವರ್ಗಾಯಿಸಿ ಆ ಸಿ.ಡಿ. ಗಳನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ದೂರುದಾರರು ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 2,000/- ರೂ. ಮುಖಬೆಲೆಯ 10 ನೋಟುಗಳನ್ನು ಹಾಗೂ 500/- ರೂ. ಮುಖಬೆಲೆಯ 10 ನೋಟನ್ನು ಹಾಜರುಪಡಿಸಿದ್ದು, ಸದರಿ ನೋಟುಗಳ ವಿವರಗಳನ್ನು ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿಕೊಂಡ ನಂತರ ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-2 ಶ್ರೀಮತಿ ಮಹಾಲಕ್ಷ್ಮಿರವರು ದೂರುದಾರರು ಧರಿಸಿದ ಪ್ಯಾಂಟಿನ ಬಲಬಾಗದ ಜೇಬಿನಲ್ಲಿಟ್ಟಿರುತ್ತಾರೆ.

iv) ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿ ಹೋಗಿ ಅಕ್ರಮ-ಸಕ್ರಮದ ಟಿ.ಸಿ.ಯ ಬಗ್ಗೆ ಕೇಳಿದಾಗ ಎದುರುದಾರರು ಲಂಚದ ಹಣ ಕೇಳಿದರೆ ದೂರುದಾರರು ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ನೀಡಿದಾಗ, ಅವರು ಸ್ವೀಕರಿಸಿದ ನಂತರ, ದೂರುದಾರರಿಗೆ ಹೊರಬಂದು ಮುಖವನ್ನು ಕೈಯಿಂದ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳು ಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

v) ದಿನಾಂಕ 27/11/2018 ರಂದು ದೂರುದಾರರು, ನೆರಳು ಮತ್ತು ಪಂಚಸಾಕ್ಷಿಗಳು ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಶಿಕಾರಿಪುರ

ನ್ಯಾಯಾಲಯದ ಮುಂಭಾಗದ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಯು ದೂರುದಾರರ ಸ್ನೇಹಿತ ನಾಗರಾಜುರವರಿಗೆ ಎದುರುದಾರರಿಗೆ ಪೋನ್ ಮಾಡುವಂತೆ ಹೇಳಿದಾಗ, ದೂರುದಾರರ ಸ್ನೇಹಿತ ಆತನ ಮೊಬೈಲ್ ನಂ: 9900599060 ನಿಂದ ಎದುರುದಾರರ ಮೊಬೈಲ್ ನಂ: 9900899864 ಗೆ ಕರೆ ಮಾಡಿ, ಎದುರುದಾರರಿಗೆ ಎಲ್ಲಿದ್ದೀರಾ ಎಂದು ವಿಚಾರಿಸಿದಾಗ, ಈಗ ಆಪೀಸ್‌ನಲ್ಲಿದ್ದು ಊಟಕ್ಕೆ ಹೋಗುತ್ತಿದ್ದೇನೆ ನಂತರ ಬನ್ನಿ ಎಂದು ತಿಳಿಸಿದಾಗ, ದೂರುದಾರರ ಸ್ನೇಹಿತ ಬಸ್ ಸ್ಟಾಂಡ್‌ನಲ್ಲಿ ಇರುವುದಾಗಿ, ಇನ್ನು 05 ನಿಮಿಷದಲ್ಲಿ ಬರುತ್ತೇನೆಂದು ಹೇಳಿದಾಗ ಆಯಿತ್ತು ಬನ್ನಿ ಎಂದು ತಿಳಿಸಿದ್ದು, ಆಗ ದೂರುದಾರರು, ದೂರುದಾರರ ಸ್ನೇಹಿತ ನಾಗರಾಜು ಮತ್ತು ನೆರಳು ಸಾಕ್ಷಿಯೊಂದಿಗೆ ಎದುರುದಾರರ ಕೊಠಡಿಯ ಬಳಿ ಹೋಗಿದ್ದು, ದೂರುದಾರರು ಮತ್ತು ದೂರುದಾರರ ಸ್ನೇಹಿತ ನಾಗರಾಜು ಎದುರುದಾರರ ಕೊಠಡಿಯ ಒಳಗೆ ಹೋಗುತ್ತಿದ್ದಾಗ ಎದುರುದಾರರು ಕೊಠಡಿಯಿಂದ ಹೊರಗಡೆ ಬಂದಿದ್ದು ದೂರುದಾರರನ್ನು ಮತ್ತು ಆತನ ಸ್ನೇಹಿತನನ್ನು ಕಛೇರಿಯ ಆವರಣದ ಒಳಗಡೆ ಕರೆದುಕೊಂಡು ಹೋಗಿ ದೂರುದಾರನ ಸ್ನೇಹಿತ ಏನು ಮಾಡುವುದು, ದೂರುದಾರರ ಕೆಲಸ ಎಂದಾಗ, ಎದುರುದಾರರು ಏನು ಸರಿ ಮಾಡಿ ಕಂಟ್ರಾಕ್ಟರ್ ಕಳುಹಿಸಿ ಕೆಲಸ ಮಾಡಿಸುತ್ತೇನೆ ಅಂತ ಹೇಳಿದ್ದು ಆಗ ದೂರುದಾರರು ಎಲ್ಲಾ ನಿಮ್ಮ ಕೈಯಲ್ಲಿದೆ ಬೇಗ ಮಾಡಿಸಿಕೊಡಿ ಎಂದು ಹೇಳಿದಾಗ, ಎದುರುದಾರರು ಈಗ ಎಷ್ಟು ಇದೆ ಅಷ್ಟು ಕೊಡಿ ಎಂದು ಕೇಳಿ, ದೂರುದಾರರ ಸ್ನೇಹಿತ ನಾಗರಾಜು ರವರು 25,000/- ರೂ ಕೊಡುತ್ತೇವೆ, ಉಳಿದ ಹಣ ಕೆಲಸ ಆದ ಮೇಲೆ ಕೊಡುತ್ತೇವೆ ಅಂತ ಹೇಳಿದಾಗ, ಆಗ ದೂರುದಾರರು 25 ಸಾವಿರ ಇದೆ ಎಂದು ಹಣ ನೀಡಿದಾಗ, ಎದುರುದಾರರು ಅದನ್ನು ಬಲಗೈಯಲ್ಲಿ ಸ್ವೀಕರಿಸಿ ಬಲಗೈಯಿಂದ ಪ್ಯಾಂಟಿನ ಮುಂಭಾಗ ಬಲ ಬಾಗದಲ್ಲಿ ಇಟ್ಟುಕೊಂಡಿರುತ್ತಾರೆ. ದೂರುದಾರರು ಸ್ವಲ್ಪ ಆದಷ್ಟು ಬೇಗ ಕೆಲಸ ಮಾಡಿಸಿಕೊಡಿ ಎಂದಾಗ ಆಯಿತ್ತು ಮಾಡಿಸಿಕೊಡುತ್ತೇನೆ ಎಂದು ಇನ್ನು ಅರ್ದ ಗಂಟೆ ಬಿಟ್ಟು ಬನ್ನಿ ಅಂತ ಹೇಳಿ ಕಛೇರಿಯ ಒಳಗೆ ಹೋಗಿದ್ದು ನಂತರ ದೂರುದಾರರು ಮುಖವನ್ನು ಒರೆಸಿಕೊಳ್ಳುವ ಮೂಲಕ ಮಧ್ಯಾಹ್ನ ಸುಮಾರು 1.52ಕ್ಕೆ ಸನ್ನೆ ಮಾಡಿರುತ್ತಾರೆ.

vi) ಆಗ ತನಿಖಾಧಿಕಾರಿಯವರು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ದೂರುದಾರ ಮತ್ತು ಆತನ ಸ್ನೇಹಿತ ಇದ್ದ ಸ್ಥಳಕ್ಕೆ ಧಾವಿಸಿ, ನಂತರ ಎಲ್ಲರು ಎದುರುದಾರರ ಕೊಠಡಿ ಒಳಗೆ ಹೋದಾಗ, ದೂರುದಾರರು ಎದುರುದಾರರನ್ನು ತೋರಿಸಿ, ಇವರೇ ತನ್ನಿಂದ ಲಂಚದ ಹಣ 25,000/- ರೂ.ಗಳನ್ನು ಪಡೆದುಕೊಂಡಿರುತ್ತಾರೆ ಎಂದು ತಿಳಿಸಿದ ಮೇರೆಗೆ, ಎದುರುದಾರರು ತನಿಖಾ ತಂಡವನ್ನು ನೋಡುತ್ತಿದಂತೆ ಅವರ ಬಲಗೈಯನ್ನು ಪ್ಯಾಂಟಿನ ಬಲಜೇಬಿನೊಳಗೆ ಹಾಕಿ ಹಣವನ್ನು ತೆಗೆದುಕೊಂಡು ಅದನ್ನು ಎಡಗೈಗೆ ವರ್ಗಾಹಿಸಿ ಎಡಗೈನಿಂದ

ಕುಳಿತುಕೊಂಡಿದ್ದ ಚೇರಿನ ಮುಂಬಾಗದ ಟೇಬಲಿನ ಕೆಳಗಡೆ ಬೀಳಿಸಿದ್ದು, ಆಗ ತನಿಖಾಧಿಕಾರಿಯು ಅವರ ಗುರುತಿನ ಚೀಟಿಯನ್ನು ತೋರಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಆ ದ್ರಾವಣವನ್ನು ಮೂರು ಗಾಜಿನ ಬಟ್ಟಲುಗಳಲ್ಲಿ ತೆಗೆದುಕೊಂಡು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಆ ದ್ರಾವಣಗಳನ್ನು ಎರಡು ಬಾಟಲಿಗಳಲ್ಲಿ ಹಾಕಿ ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ.

vii) ತನಿಖಾಧಿಕಾರಿಯು ಎದುರುದಾರರಿಗೆ ದೂರುದಾರರಿಂದ ಪಡೆದ ಹಣವನ್ನು ಎತ್ತಿ ಕೊಡುವಂತೆ ಹೇಳಿದಾಗ ಎದುರುದಾರರು ಲಂಚದ ಹಣವನ್ನು ಎತ್ತಿ ತನಿಖಾಧಿಕಾರಿಯವರು ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚ ಸಾಕ್ಷಿದಾರರಿಬ್ಬರು ಆ ನೋಟುಗಳ ವಿವರಗಳು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ವಿವರಗಳಿಗೆ ಹೋಲಿಕೆಯಾಗುತ್ತದೆಯೇ ಎಂದು ಪರಿಶೀಲಿಸಿ ನೋಡಿದಾಗ, ಆ ನೋಟುಗಳು ತಾಳೆಯಾದ್ದರಿಂದ ತನಿಖಾಧಿಕಾರಿಯವರು ಆ ಹಣವನ್ನು ವಶಕ್ಕೆ ಪಡೆದಿರುತ್ತಾರೆ.

viii) ನಂತರ ತನಿಖಾಧಿಕಾರಿಯವರು ಎದುರುದಾರರಿಗೆ ಬೇರೊಂದು ಪ್ಯಾಂಟನ್ನು ನೀಡಿ, ಅವರು ಲಂಚದ ಹಣವನ್ನು ಇಟ್ಟುಕೊಂಡಿದ್ದ ಪ್ಯಾಂಟನ್ನು ಪಡೆದು ಮೂರನೆ ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಪ್ಯಾಂಟಿನ ಬಲಜೇಬಿನ ಭಾಗವನ್ನು ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ದ್ರಾವಣವನ್ನು ಮತ್ತು ಪ್ಯಾಂಟನ್ನು ಹಾಗೂ ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆದಿರುತ್ತಾರೆ.

ix) ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದ ಮೇರೆಗೆ ಎದುರುದಾರರು ಅವರ ಸಮಜಾಯಿಷಿಯಲ್ಲಿ " ಇಂದು ಮಧ್ಯಾಹ್ನ ದೂರುದಾರರು ಅಕ್ರಮ-ಸಕ್ರಮ ಹಣ ಪಾವತಿಸಲು ಬಂದಿದ್ದು ಹಣ ಕಟ್ಟಲು ನನಗೆ ತಿಳಿಸಿ ನಾನು ಅರ್ಜೆಂಟ್ ದಾವಣಗೆರೆಗೆ ಹೋಗಬೇಕು ಹಣ ಕಟ್ಟಿಕೊಳ್ಳಿ ಎಂದು ಕೇಳಿದರು. ಹಣವನ್ನು ಕ್ಯಾಶ್ ಕೌಂಟರ್ ನಲ್ಲಿ ಪಾವತಿಸಿ ಎಂದು ಹೇಳಿದೆ ಆಗ

ಸದರಿಯವರು ಹಣ ನೀವೇ ಕಟ್ಟಿ ಎಂದು ಹಣ ಕೊಡಲು ಬಂದಿದ್ದು, ನಂತರ ನೀವೆ ಹಣ ಪಾವತಿಸಿ ರಶೀದಿ ಹಾಕಿಸಿ ಎಂದು ಒತ್ತಾಯ ಮಾಡಿ, ಕ್ಯಾಶ್ ಕೌಂಟರ್ ನಲ್ಲಿ ಕಟ್ಟಿ ಎಂದು ಹೇಳುತ್ತಿದ್ದಾಗ ಟೇಬಲ್ ಮೇಲೆ ಇಡಲು ಬಂದರು. ನಂತರ ಒತ್ತಾಯದಿಂದ ನನ್ನ ಜೇಬಿನಲ್ಲಿ ಇಡಲು ಬಂದಾಗ ತಳ್ಳಿದೆ, ಹಣ ಇತ್ಯಾದಿ ಟೇಬಲ್ ಕೆಳಗೆ ಬಿದ್ದಿರುತ್ತದೆ, ಹಣ ಎಷ್ಟು ಎಂದು ಗೊತ್ತಿರುವುದಿಲ್ಲ ಮತ್ತು ಅವರಿಂದ ಹಣ ಪಡೆದಿರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿಯು ಅಲ್ಲಗಳೆದಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಯು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇರುವುದು ಕಂಡು ಬರುತ್ತದೆ. ನಂತರ ತನಿಖಾಧಿಕಾರಿಯವರು ಎದುರುದಾರರ ಮಾದರಿ ಧ್ವನಿಯನ್ನು ಪಡೆದು ಆ ಮಾದರಿ ಧ್ವನಿಯನ್ನು ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ನಂತರ ಎಲ್ಲರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ದಾಖಲೆಗಳನ್ನು ಮತ್ತು ತಜ್ಞರ ವರದಿಗಳನ್ನು ಪಡೆದುಕೊಂಡು ಎದುರುದಾರರ ವಿರುದ್ಧ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯಿದೆ 1988 (ತಿದ್ದುಪಡಿ ಕಾಯಿದೆ 2018) ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3) ಎದುರುದಾರರ ಸಮಜಾಯಿಷಿಯಲ್ಲಿ ಅವರು ವಯೋನಿವೃತ್ತಿ ಹೊಂದಿರುತ್ತಾರೆಂದು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇದರ ನೌಕರನಾಗಿದ್ದು, ಸದರಿ ನಿಗಮ ಇಲಾಖಾ ವಿಚಾರಣೆಯನ್ನು ನಡೆಸಬೇಕೆಂದು ಹಾಗೂ ಅವರ ವಿರುದ್ಧ ಶಿಸ್ತುಕ್ರಮ ಕೈಬಿಡಲು ಕೋರಿರುತ್ತಾರೆ. ಎದುರುದಾರರಿಂದ ವಶಪಡಿಸಿಕೊಂಡ ಮುದ್ದೇಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇರುವುದು ತಜ್ಞರ ವರದಿಯಿಂದ ಕಂಡುಬರುತ್ತದೆ. ಎದುರುದಾರರು ಸಲ್ಲಿಸಿದ ಆಕ್ಷೇಪಣೆಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸಮಂಜಸ ಕಾರಣಗಳಾಗಿ ಕಂಡು ಬರುವುದಿಲ್ಲ ಮತ್ತು ಅವರ ಆಕ್ಷೇಪಣೆಗಳನ್ನು ಈ ಹಂತದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

4) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ

ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಆದ್ದರಿಂದ, ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳಿಂದ ಎದುರುದಾರರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರರಾಗಿದ್ದು, ಕರ್ನಾಟಕ ವಿದ್ಯಚ್ಛಕ್ತಿ ಮಂಡಳಿ ನೌಕರರುಗಳ ಕರ್ತವ್ಯಗಳು (ನಡತೆ) ನಿಬಂಧನೆಗಳು 1988 ರ ನಿಬಂಧನೆ 3 (1)(i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6) ಎದುರುದಾರರು, ಕ.ವಿ.ಪ್ರ.ನಿ. ನಿಯಮಿತದ ನೌಕರರಾಗಿದ್ದು, ಅವರ ವಿರುದ್ಧ ಶಿಸ್ತುಕ್ರಮ ನಡವಳಿ ಹೂಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ (ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಬಂಧನೆಗಳು 1987 ರ ನಿಬಂಧನೆ 14 (ಎ)(1) ಮತ್ತು 14 (ಎ) (2) ರಡಿಯಲ್ಲಿ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರ ಅನ್ವಯ ಪ್ರದತ್ತವಾದ ಅಧಿಕಾರದಡಿ ಸಕ್ರಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಎದುರುದಾರರು ದಿ: 30/06/2021 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಶಿಸ್ತು ಕ್ರಮ ನಡವಳಿ ಹೂಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ (ನಡತೆ) ನಿಬಂಧನೆಗಳು 1996 ರ ನಿಬಂಧನೆ 171 (ಬಿ)(1) ರಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಲು ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/11/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.